ಜನರಿಗೆ ಹತ್ತಿರವಾಗಿರುವ ಸಹಕಾರಿ ಬ್ಯಾಂಕ್‌ಗಳು: ಸಚಿವ ಸುರೇಶ್ ಕುಮಾರ್

ಬೆಂಗಳೂರಿಗರನ್ನು ವಂಚಿಸುವುದು ಸುಲಭ: ಪೋಲಿಸ್ ಆಯುಕ್ತ ಭಾಸ್ಕರ್‌ರಾವ್

ಬೆಂಗಳೂರು: ಸಹಕಾರಿ ಬ್ಯಾಂಕ್‌ಗಳು ಶೆಡ್ಯೂಲ್ಡ್ ಮತ್ತು ರಾಷ್ಟ್ರೀಯ ಬ್ಯಾಂಕ್‌ಗಳಿಗಿಂತ ಜನರಿಗೆ ಹತ್ತಿರವಿದ್ದು ಉತ್ತಮ ಕೆಲಸ ಮಾಡುತ್ತಿವೆ ಎಂದು ಶಿಕ್ಷಣ ಸಚಿವ ಸುರೇಶ್ ಕುಮಾರ್ ಪ್ರತಿಪಾದಿಸಿದರು.

ನಗರದ ರಾಜಾಜಿನಗರದಲ್ಲಿರುವ ಶ್ರೀ ಶಂಕರ ಸೇವಾ ಸಮಿತಿಯಲ್ಲಿ ನಡೆದ ಬ್ರಾಹ್ಮೀ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತದ ರಜತ ಮಹೋತ್ಸವ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡುತ್ತಿದ್ದ ಅವರು, ಸಹಕಾರಿ ಬ್ಯಾಂಕ್‌ಗಳು ಮತ್ತು ಸಹಕಾರಿ ಸೊಸೈಟಿಗಳು ಗ್ರಾಹಕರೊಂದಿಗೆ ನಿಜವಾದ ಆತ್ಮೀಯತೆ ಹೊಂದಿವೆ, ಈ ಬ್ಯಾಂಕ್‌ಗಳು ಬದ್ಧತೆ ಮತ್ತು ಉತ್ತರದಾಯಿತ್ವ ಹೊಂದಿವೆ ಎಂದು ನುಡಿದರು.

ಇಂದಿನ ದಿನಗಳಲ್ಲಿ ಸಾಲ ಪಡೆದು ಓಡಿಹೋಗುವವರ ಸಂಖ್ಯೆಯೇ ಹೆಚ್ಚಿರುವಾಗ ಬ್ರಾಹ್ಮಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತದಲ್ಲಿ 38 ಕೋಟಿ ರೂಪಾಯಿ ಠೇವಣಿ ಇದ್ದು, ಈ ಬ್ಯಾಂಕ್‌ನಲ್ಲಿ ಶೇ.98ರಷ್ಟು ಮರುಪಾವತಿ ಇದೆ ಮತ್ತು 70 ಲಕ್ಷ ರೂ. ಲಾಭಗಳಿಸಿರುವುದು ಸಂತಸಕರ ಸಂಗತಿ ಎಂದು ಹೇಳಿದರಲ್ಲದೆ, ಇದೊಂದು ಪರಿವಾರ ಇದ್ದಂತೆ ರಜತ ಮಹೋತ್ಸವ ಸಂದರ್ಭದಲ್ಲಿ ಬ್ಯಾಂಕಿನ ಹಿರಿಯ ಸದಸ್ಯರನ್ನೂ ಸನ್ಮಾನಿಸುತ್ತಿರುವುದು ಉತ್ತಮ ಬೆಳವಣಿಗೆ ಎಂದರು.

ಮೋಸಹೋಗುವವರು ಬೆಂಗಳೂರಿನಲ್ಲೇ ಹೆಚ್ಚು!: ಬೆಂಗಳೂರಿನಲ್ಲಿ ಆಗುವಷ್ಟು ಆರ್ಥಿಕ ಅಪರಾಧ ಇನ್ನೆಲ್ಲೂ ಆಗುವುದಿಲ್ಲ,

ಇದಕ್ಕೆ ಬ್ಯಾಂಕ್‌ಗಳ ಆಡಳಿತ ಮಂಡಳಿ ಮಾತ್ರ ಕಾರಣವಲ್ಲ, ಬಡ್ಡಿಯ ಆಸೆಗೆ ಬಿದ್ದು, ಹಣ ಹೂಡಿಕೆ ಮಾಡುವುದು ತಪ್ಪು ಎಂದು ನಗರ ಪೋಲಿಸ್ ಆಯುಕ್ತ ಭಾಸ್ಕರ್ ರಾವ್ ಇದೇ ಸಂದರ್ಭದಲ್ಲಿ ಸಾರ್ವಜನಿಕರನ್ನು ಎಚ್ಚರಿಸಿದರು.

ಬೆಂಗಳೂರಿನಲ್ಲಿ ಇಂತಹ ಪ್ರಕರಣಗಳು ಹೆಚ್ಚಾಗುತ್ತಿವೆ. ಬೆಂಗಳೂರಿನ ಜನರನ್ನು ಚೆನ್ನಾಗಿ ಮಾತನಾಡಿ ಮೋಡಿ ಮಾಡಬಹುದು ಎಂಬುದು ವಂಚಕರಿಗೆ ಗೊತ್ತಿದೆ ಎಂದು ಹೇಳಿದ ಅವರು,

ಇಂತಹ ಸಂದರ್ಭದಲ್ಲೂ ಬ್ರಾಹ್ಮಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ 25 ವರ್ಷಗಳಿಂದ ಯಶಸ್ವಿಯಾಗಿ ಮುಂದುವರೆದಿರುವುದು ಆಡಳಿತ ಮಂಡಳಿ ಮತ್ತು ಸದಸ್ಯರ ಬದ್ಧತೆ ತೋರಿಸುತ್ತಿದೆ. ಮುಂದಿನ 25 ವರ್ಷಗಳೂ ಸಹ ಬ್ಯಾಂಕಿಗೆ ಸವಾಲಿನ ಹಾದಿಯಾಗಿರಲಿದೆ ಎಂದು ಹೇಳಿದರು.

ಇಂದಿನ ದಿನಗಳಲ್ಲಿ ಬಹಳಷ್ಟು ಆರ್ಥಿಕ ಸಂಸ್ಥೆಗಳಿವೆ, ಇವುಗಳ ಪೈಕಿ ಬ್ರಾಹ್ಮಿ ಯಶಸ್ವಿಯಾಗಿ ಮುನ್ನಡೆದಿರುವುದು ಬ್ಯಾಂಕಿನ ಆಡಳಿತ ಮಂಡಳಿ ಬದ್ಧತೆ ಮತ್ತು ಸೇವಾ ಮನೋಭಾವನದಿಂದ ಸಾಧ್ಯವಾಗಿದೆ ಎಂದರಲ್ಲದೆ,

ಬ್ಯಾಂಕ್‌ಗಳು ನಿಮ್ಮ ಹಣ ಮಾತ್ರವಲ್ಲ, ನಿಮ್ಮ ಕನಸು, ನಿಮ್ಮ ಆಸೆ, ನಿಮ್ಮ ಭವಿಷ್ಯದ ರಕ್ಷಕನಾಗಿ ಕೆಲಸ ಮಾಡುತ್ತದೆ. ಹೀಗಾಗಿ ನಿಮ್ಮ ಜವಾಬ್ದಾರಿ ಹೆಚ್ಚಿದೆ ಎಂದು ಆಡಳಿತ ಮಂಡಳಿಗೆ ಪೋಲಿಸ್ ಆಯುಕ್ತರು ಕಿವಿಮಾತು ಹೇಳಿದರು.

ಮುಂದಿನ ದಿನಗಳಲ್ಲಿ ಹೆಚ್ಚಿನ ಸವಾಲಿನ ದಿನಗಳಾಗಿರಲಿವೆ, ವರ್ಷಾನುಗಟ್ಟಲೆ ಕಟ್ಟಿದ ಸಂಸ್ಥೆ ಅಥವಾ ವ್ಯಕ್ತಿತ್ವವನ್ನು ಕೆಲವೇ ಕ್ಷಣಗಳಲ್ಲಿ ಮಣ್ಣುಪಾಲು ಮಾಡುವಂತಹ ಪರಿಸ್ಥಿತಿಯಲ್ಲಿ ನಾವಿದ್ದೇವೆ,

ಬ್ರಾಹ್ಮಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಉತ್ತಮ ತಂಡವನ್ನು ಹೊಂದಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಅಗಾಧವಾಗಿ ಬೆಳೆಯಲಿ ಎಂದು ಹಾರೈಸಿದರು.

ಸಮಾರಂಭದಲ್ಲಿ ಪಾಲ್ಗೊಂಡಿದ್ದ ಶಾಸಕ ಉದಯ್ ಗರುಡಾಚಾರ್,

ನಗರದ ದಕ್ಷಿಣ ಭಾಗದಲ್ಲೂ ಶಾಖೆ ತೆರೆಯುವಂತೆ ಮನವಿ ಮಾಡಿ ಬ್ಯಾಂಕಿನ ಯಶಸ್ಸಿಗೆ ಸಂತಸ ವ್ಯಕ್ತಪಡಿಸಿದರು.

ಸಮಾರಂಭದಲ್ಲಿ ಸಹಕಾರ ಸಂಘಗಳ ಅಪರ ನಿಬಂಧಕ ಕೆ.ಎಸ್. ನವೀನ್, ಸಹಕಾರ ಸಂಘಗಳ ಜಂಟಿ ನಿಬಂಧಕ ಎಂ.ಡಿ. ನರಸಿಂಹಮೂರ್ತಿ, ಬ್ರಾಹ್ಮಿ ಸೊಸೈಟಿ ಅಧ್ಯಕ್ಷ ಆರ್. ಲಕ್ಷ್ಮಿಕಾಂತ್, ಉಪಾಧ್ಯಕ್ಷ ರಾಮಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು.

ಸೊಸೈಟಿ ರಜತ ಮಹೋತ್ಸವದ ಹಿನ್ನೆಲೆಯಲ್ಲಿ ಬ್ಯಾಂಕಿನ ಹಿರಿಯ ಸದಸ್ಯರನ್ನು ಮತ್ತು ವಿವಿಧ ಪರೀಕ್ಷೆಗಳಲ್ಲಿ ಉತ್ತಮ ಅಂಕ ಪಡೆದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

ಮಾಗಡಿ ಪಟ್ಟಣದ ಅಂಬೇಡ್ಕರ್ ಭವನದಲ್ಲಿ ತೋಟದಮನೆ ಗಿರೀಶ್ ರಚನೆಯ ಗುಡಿಸಲು ಬೆಳಕು ಕವನ ಸಂಕಲನಗಳನ್ನು ಖ್ಯಾತ ಕವಿ ಡಾ.ಡಿ ಸಿದ್ದಲಿಂಗಯ್ಯ ಬಿಡುಗಡೆ ಮಾಡಿದರು. ಮಾಜಿ ಶಾಸಕ ಎಚ್ ಸಿ ಬಾಲಕೃಷ್ಣ ಮುಖಂಡರಾದ ಕಲ್ಕೆರೆ ಧನಂಜಯ್ ಅತ್ತಿಮ್ಮೆರೆ ಬಸವರಾಜು ತಿರುಮಲೆ ರಂಗಹನುಮಯ್ಯ ಧನಂಜಯನಾಯಕ್ ಜೆ ಪಿ ಚಂದ್ರೇಗೌಡ ಮತ್ತೀಕೆರೆ ಸೀಬೆಗೌಡ ಹೊಸಪೇಟೆ ಗೋವಿಂದ್ ಬೆಸ್ಕಾಮ್ ರಾಮಕೃಷ್ಣಯ್ಯ ಹಕ್ಕಿನಾಳ್ ವೆಂಕಟೇಶ್ ಮತ್ತಿತರರಿದ್ದರು.

ವಿನೂತನ ಆಟೊ ಸೆಂಟ್ ಬಿಡುಗಡೆ

ಮೈಸೂರು: ಮೈಸೂರು ಬೃಹತ್ ದಸರಾ ಉತ್ಸವಕ್ಕೆ ಸಜ್ಜಾಗುತ್ತಿರುವ ಈ ಹೊತ್ತಿನಲ್ಲಿ, ಪ್ರಾದೇಶಿಕ ಪರಿಮಳ ಮಾರುಕಟ್ಟೆಯಲ್ಲಿ ಪ್ರಮುಖ ಬ್ರಾಂಡ್ ಆಗಿ ಗುರುತಿಸಿಕೊಂಡಿರುವ ರಿಪ್ಪಲ್ ಫ್ರೇಗ್ರನ್ಸ್, ಲಿಯಾ ಶ್ರೇಣಿಯ ಅಡಿಯಲ್ಲಿ ವಿನೂತನ ಆಟೊ ಸೆಂಟ್ ಬಿಡುಗಡೆ ಮಾಡಿದೆ. ನಗರದಲ್ಲಿ ಆಟೊ ಪ್ರಯಾಣದ ಅನುಭವವನ್ನು ಸುಮಧುರಗೊಳಿಸಲು ಈ ಸೆಂಟ್ ಸಹಾಯಕವಾಗಲಿದೆ. ದಸರಾ ಉತ್ಸವದ ಸಂದರ್ಭಕ್ಕೆ ವಿಶೇಷವಾಗಿ ವಿನ್ಯಾಸಗೊಳಿಸಲಾದ ಈ ಉತ್ಪನ್ನವನ್ನು ರಾಜವಂಶಸ್ಥರಾದ ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮತ್ತು ರಿಪ್ಪಲ್ ಫ್ರೇಗ್ರನ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಶ್ರೀ ಕಿರಣ್ ರಂಗಾ ಅವರು ಇಂದು ಪ್ರಾಯೋಗಿಕ ಆಟೊ ರ್‍ಯಾಲಿಯೊಂದಿಗೆ ಅನಾವರಣಗೊಳಿಸಿದರು. ಮೈಸೂರು ಅರಮನೆಯಿಂದ ಪ್ರಾರಂಭವಾದ ಈ ರ್‍ಯಾಲಿಯಲ್ಲಿ ನಗರದ ಆಟೊರಿಕ್ಷಾ ಚಾಲಕರು ಉತ್ಸಾಹದಿಂದ ಭಾಗವಹಿಸಿದರು.

ಈ ವಿನೂತನ ಉತ್ಪನ್ನವನ್ನು ಬಿಡುಗಡೆ ಮಾಡಿ ಮಾತನಾಡಿದ ರಿಪ್ಪಲ್ ಫ್ರೇಗ್ರನ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಶ್ರೀ ಕಿರಣ್ ರಂಗಾ, 'ಮುಂಬರುವ ದಸರಾ ಉತ್ಸವವನ್ನು ಕಣ್ತುಂಬಿಕೊಳ್ಳಲು ದೇಶದ ನಾನಾ ಭಾಗಗಳಿಂದ ಸಾಕಷ್ಟು ಪ್ರವಾಸಿಗರು ಮೈಸೂರಿಗೆ ಭೇಟಿ ನೀಡುವ ನಿರೀಕ್ಷೆಯಿದೆ. ಈ ಉತ್ಸವಕ್ಕಾಗಿ ನಗರವನ್ನು ವಿಶೇಷವಾಗಿ ಅಲಂಕರಿಸಲಾಗುತ್ತದೆ. ಈ ವೇಳೆ ಆಟೊ ಪ್ರಯಾಣಿಕರಿಗೆ ಸುಖಕರ ಪ್ರಯಾಣದ ಅನುಭವ ನೀಡಲು ನಾವು ಈ ವಿಶಿಷ್ಟ ಉತ್ಪನ್ನವನ್ನು ಪರಿಚಯಿಸುತ್ತಿದ್ದೇವೆ. ಇದು ಆಟೊರಿಕ್ಷಾದ ಏರ್‌ಕೇರ್ ಅಗತ್ಯಗಳನ್ನು ಪೂರೈಸುತ್ತದೆ' ಎಂದರು.

ಮುಂದುವರಿದು ಮಾತನಾಡಿದ ಅವರು, 'ಆಟೊ ಸೆಂಟ್‌ನ ದೀರ್ಘಕಾಲೀನ ನೈಸರ್ಗಿಕ ಸುಗಂಧವು ಗ್ರಾಹಕರಿಗೆ ಆನಂದದಾಯಕ ಆಟೊ ಪ್ರಯಾಣದ ಅನುಭವವನ್ನು ನೀಡುತ್ತದೆ ಮತ್ತು ಇದು ಸ್ಮರಣೀಯ ಸವಾರಿಯಾಗಲಿದೆ' ಎಂದು ಹೇಳಿದರು.

ಆಟೊ ವಿನ್ಯಾಸವನ್ನು ಗಮನದಲ್ಲಿಟ್ಟುಕೊಂಡು ಲಿಯಾ ಆಟೊ ಸೆಂಟ್ ಉತ್ಪನ್ನವನ್ನು ವಿಶೇಷವಾಗಿ ವಿನ್ಯಾಸಗೊಳಿಸಲಾಗಿದೆ. ಆರೊಮ್ಯಾಟಿಕ್ ತೈಲಗಳೊಂದಿಗೆ ಗ್ರಾಹಕರನ್ನು ವಿಶೇಷ ಆನಂದದೆಡೆಗೆ ಕರೆದೊಯ್ಯಲು ಈ ಉತ್ಪನ್ನವನ್ನು ರೂಪಿಸಲಾಗಿದೆ. ಉತ್ಪನ್ನವನ್ನು ಮೂರು ರೂಪಾಂತರಗಳಲ್ಲಿ ಬಿಡುಗಡೆ ಮಾಡಲಾಗಿದೆ, ಅವುಗಳೆಂದರೆ; ಸ್ಪಾರ್ಕಿಂಗ್ ಸಿಟ್ರಸ್, ಓಷನ್ ಡ್ರೀಮ್ ಮತ್ತು ಲ್ಯಾವೆಂಡರ್. ಒಂದು ಪ್ಯಾಕ್‌ನಲ್ಲಿ 250 ಸ್ಪ್ರೇಗಳು ಇರಲಿವೆ.

ಉತ್ಪನ್ನ ಕೈಗೆಟುಕುವ ದರದಲ್ಲಿ, ಅಂದರೆ 130 ರೂಪಾಯಿಗಳಲ್ಲಿ ಸಿಗಲಿದೆ. ಈ ಹೊಸ ಆವಿಷ್ಕಾರದೊಂದಿಗೆ, ಲಿಯಾ ಆಟೊ ಪ್ರಯಾಣದ ಅನುಭವವನ್ನು ಉತ್ಕೃಷ್ಟಮಟ್ಟಕ್ಕೆಕೊಂಡೊಯ್ದಿದೆ.

ಈ ವಿನೂತನ ಉತ್ಪನ್ನದ ಬಗ್ಗೆ ಮಾತನಾಡಿದ ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ 'ಉತ್ಪನ್ನವು ಆಟೊ ವಲಯದಲ್ಲಿ ಗಣನೀಯ ಬದಲಾವಣೆಯನ್ನು ತರುವ ಮೊದಲ ಹೆಜ್ಜೆಯಾಗಿದೆ. ಅಂತಹ ಉತ್ಪನ್ನವನ್ನು ವಿನ್ಯಾಸಗೊಳಿಸಿದ್ದಕ್ಕಾಗಿ ಮತ್ತು ಪ್ರಯಾಣಿಕರ ಜೀವನಶೈಲಿಯ ಅಗತ್ಯತೆಗಳನ್ನು ಪೂರೈಸಿದ್ದಕ್ಕಾಗಿ ರಿಪ್ಪಲ್ ಫ್ರೇಗ್ರನ್ಸ್ ಪ್ರಯತ್ನವನ್ನು ನಾನು ಅಭಿನಂದಿಸುತ್ತೇನೆ' ಎಂದರು.

ಮಾಗಡಿ ತಿರುಮಲೆ ಜೈ ಭುವನೇಶ್ವರಿ ಕನ್ನಡ ಸಂಘದ ಸದಸ್ಯರು ಮಾಜಿ ಪುರಸಭಾ ಅಧ್ಯಕ್ಷ ಹೊಸಪೇಟೆಯ ಪುರುಶೊತ್ತಮ್ ಜವರಪ್ಪ ಅವರನ್ನು ಸನ್ಮಾನಿಸಿ ಗೌರವಿಸಿದರು.

ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯಲ್ಲಿ ಇತ್ಯರ್ಥಗೊಂಡಿರುವ ಮೂಲ ದಾಖಲೆಯನ್ನು ಅಕ್ಟೋಬರ್ 03 ರೊಳಗೆ ಪಡೆಯಲು ಸೂಚನೆ

ಬೆಂ.ನಗರ.ಜಿಲ್ಲೆ : ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆ, ಕಾವೇರಿ ಭವನ, ಬೆಂಗಳೂರು ನಗರ ಜಿಲ್ಲೆಯಲ್ಲಿ 1989ನೇ ಇಸವಿಯಿಂದ ಡಿಸೆಂಬರ್ 2013ರ ವರೆಗೆ ದಾಖಲಾಗಿ ಇತ್ಯರ್ಥಗೊಂಡಿರುವ ಗ್ರಾಹಕ ವ್ಯಾಜ್ಯಗಳ ದೂರುಗಳು ಹಾಗೂ ಅಮಲ್ಜಾರಿ ಪ್ರಕರಣಗಳ ಕಡತಗಳನ್ನು ನಾಶಗೊಳಿಸಲು ಕ್ರಮವಹಿಸಲಾಗುತ್ತಿದೆ.

ಆದ್ದರಿಂದ ಸಂಬಂಧಪಟ್ಟ ಪಕ್ಷಕಾರರು/ವಕೀಲರು ಮೇಲ್ಕಂಡ ಇಸವಿಯವರೆಗಿನ ಪ್ರಕರಣಗಳಲ್ಲಿ ಮೂಲ ದಾಖಲೆಗಳನ್ನು ಸಲ್ಲಿಸಿದ್ದಲ್ಲಿ, ಅಕ್ಟೋಬರ್ 03, 2019ರೊಳಗಾಗಿ ಖುದ್ದು ಹಾಜರಾಗಿ ಅರ್ಜಿಯನ್ನು ಸಲ್ಲಿಸಿ, ಮೇಲ್ಕಂಡ ಕಚೇರಿಯಲ್ಲಿ ಪಡೆಯಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆ. ಕಾವೇರಿ ಭವನ, 8ನೇ ಮಹಡಿ, ಜಲಮಂಡಳಿ ಕಟ್ಟಡ, ಬೆಂಗಳೂರು-09 ಇವರನ್ನು ಸಂಪರ್ಕಿಸಬಹುದು.

ಫೀನಿಕ್ಸ್ ಮಾರ್ಕೆಟ್ ಸಿಟಿಯಲ್ಲಿ ಕೆ ಬ್ಯೂಟಿಕಾನ್ ಆಯೋಜಿಸಲಾಯಿತು

ಕೆ.ಆರ್.ಪುರ: ಸೌಂದರ್ಯ, ಕಲೆ ಮತ್ತು ಸೌಂದರ್ಯಶಾಸ್ತ್ರದ ಮೂರು ದಿನಗಳ ಸಂಭ್ರಮ ಮಹಿಳಾ ಸಬಲೀಕರಣ ಹಾಗೂ ಉದ್ಯಮಶೀಲತೆಗೆ ಹೊಸ ವ್ಯಾಖ್ಯಾನವನ್ನು ನೀಡುವ ಸಲುವಾಗಿ ಕೆ ಬ್ಯೂಟಿ ಕಾನ್ 2019ರ ಆಯೋಜನೆ ಹಿಂದಿನ ಪ್ರಮುಖ ಉದ್ದೇಶವಾಗಿದೆ ಎಂದು ಫ್ಯಾಷನ್ ಗುರು ಪ್ರಸಾದ್ ಬಿಡಪ್ಪ ಹೇಳಿದರು.

ಫೀನಿಕ್ಸ್ ಮಾರ್ಕೆಟ್ ಸಿಟಿಯಲ್ಲಿ ಮೂರು ದಿನಗಳಕಾಲ ಕೆ ಬ್ಯೂಟಿಕಾನ್ 2019 ಕಾರ್ಯಕ್ರಮ ಆಯೋಜಿಸಿದ್ದು

ಸೌಂದರ್ಯ, ಕಲೆ ಮತ್ತು ಸೌಂದರ್ಯಶಾಸ್ತ್ರದ ಮೂರು ದಿನಗಳ ಸಂಭ್ರಮಾಚರಣೆಯಾಗಿರುವ ಈ ಕಾರ್ಯಕ್ರಮವು ಕೇವಲ ಬ್ರಾಂಡ್‌ಗಳ ಸಂಗ್ರಹವಾಗಿರದೆ , ಮೋಜಿನಿಂದ ಕೂಡಿರುವ ಮಾಸ್ಟರ್ ಕ್ಲಾಸ್ , ಕಾರ್ಯಾಗಾರಗಳು, ಸ್ಪರ್ಧೆಗಳು ಮತ್ತು ಶಾಪಿಂಗ್ ಮಾಡಲು ಕೊರಿಯಾದ ಸಾಕಷ್ಟು ಬ್ರಾಂಡ್‌ಗಳೊಂದಿಗೆ ಕಾಸೆಟಿಕ್ ಫಿಲಾಸಫಿಯ ಸಂಭ್ರಮ ವಾಗಿತ್ತು.

ಇದೇ ಮೊದಲ ಬಾರಿ ಆಯೋಜಿಸಿರುವ ಗೋಷ್ಠಿಯು ನಮ್ಮ ಸಮಾನ ಇತಿಹಾಸ ಹಾಗೂ ಸಂಸ್ಕೃತಿಯ ಒಂದು ಭಾಗವಾಗಿ ಸಹಕಾರಿ ಆರ್ಥಿಕತೆ ಮತ್ತು

ಹೊಸ ಸಂಯೋಜಿತ ಭಾರತದ ಸೃಷ್ಟಿ ಕುರಿತಂತೆ ಭರವಸೆಯ ಬೆಳಕು ಚೆಲ್ಲುತ್ತಿದೆ.

ಫೀನಿಕ್ಸ್ ಮಾರ್ಕೆಟ್ ಸಿಟಿಯಲ್ಲಿ ಶುಕ್ರವಾರ ಉದ್ಘಾಟನೆಗೊಂಡ ಮೂರು ದಿನಗಳ ಕೆ - ಬ್ಯೂಟಿಕಾನ್ 2019ರ' ಮೇಕ್ ಯುವರ್ ಓನ್ ಕೆ - ಬ್ಯೂಟಿ ಸ್ಕಿನ್‌ಕೇರ್ ರೂಟೀನ್ ' ಕುರಿತು ದಿ ಗ್ರೇಟ್ ಬ್ಯೂಟಿ ಸ್ಕೋಪ್ ಸಂಸ್ಥೆಯ ಸಂಸ್ಥಾಪಕರಾಗಿರುವ ಮಾನಸಿ ಕಾರ್ಯಾಗಾರ ನಡೆಸಿಕೊಟ್ಟರು.

ಇದೇ ವೇಳೆ ವಿವಿಧ ಬ್ರಾಂಡ್‌ಗಳ ಹಲವಾರು ಉತ್ಪನ್ನಗಳನ್ನು ಗ್ರಾಹಕರೆದುರೇ ಅನಾವರಣಗೊಳಿಸಲಾಯಿತು. ಜತೆಗೆ ಅವರ ತ್ವಚೆಯ ವಿಧಕ್ಕೆ ಅನುಗುಣವಾಗಿ ಪರಿಪೂರ್ಣವಾದ ರೂಟೀನ್ ಅನ್ನು ರೂಢಿಸಿಕೊಳ್ಳುವುದು ಹೇಗೆ ಎಂಬುದನ್ನು ಪರಿಣಿತರು ಸ್ಥಳದಲ್ಲೇ ತಿಳಿಸಿಕೊಟ್ಟರು .

ಭಾರತದಲ್ಲಿ ಕೆ - ಬ್ಯೂಟಿ (ಕೆ - ಬ್ಯೂಟಿ ಇನ್ ಇಂಡಿಯಾ) ಕುರಿತಂತೆ ರಾಷ್ಟ್ರೀಯ ಪ್ರಶಸ್ತಿ ವಿಜೇತ ಕಲಾವಿದೆ ಕ್ಲಿವರ್ ವೊಟ್ಟನ್ , ಬ್ಯೂಟಿ ಬ್ಲಾಗರ್ ಮತ್ತು ವೈದ್ಯರಾಗಿರುವ ಸೋನಿಯಾ ಥಿಯಮ್ ಮತ್ತು ಯೂಟ್ಯೂಬ , ಟೆಡ್ ಎಕ್ಸ್ ಸ್ಪೀಕರ್ ಹಾಗೂ ಉದ್ಯಮಿ ಸಲೋನಿ ಶ್ರೀವಾಸ್ತವ್ ಅವರಿಂದ ಸಂವಾದ ಹಾಗೂ ಗಹನವಾದ ಮಾಹಿತಿ ಒದಗಿಸುವ ಚರ್ಚಾ ಕಾರ್ಯಕ್ರಮ ಕೂಡ ನಡೆಯಿತು.

ಈ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಪ್ರಶಸ್ತಿ ವಿಜೇತ ಕಲಾವಿದೆ ಕೈವರ್ ವೊಟ್ಟನ್, ಮೇಕಪ್ ಮಾಸ್ಟರ್ ಕ್ಲಾಸ್ ' ಬಳಿಕ ಕೇರ್ & ಕ್ಲಾಸ್ ಸಿಇಒ ಸೃಷ್ಟಿ ಅಗರ್ವಾಲ್ ಪಾಲ್ಗೊಂಡರು.

ಸರ್ವ ಸದಸ್ಯರ ಮಹಾಸಭೆ

ಶಿಡ್ಲಘಟ್ಟ : ತಾಲ್ಲೂಕಿನ ಪ್ರಾಥಮಿಕ ಸಹಕಾರ ಕೃಷಿ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ. 81 ವರ್ಷದ ಸಹಕಾರಿ ವರ್ಷ ಸರ್ವ ಸದಸ್ಯರ ಮಹಾಸಭೆಯನ್ನು ಶಾಸಕ ವಿ ಮುನಿಯಪ್ಪ ಉದ್ಘಾಟಿಸಿದರು ಈ ಸಂದರ್ಭದಲ್ಲಿ ಪಿಕಾರ್ಡ್ ಅಧ್ಯಕ್ಷ ಭೀಮೇಶ್ . ಉಪಾಧ್ಯಕ್ಷ ಮಾದೇನಹಳ್ಳಿ ರವಿ.ಡಿಎಸ್‌ಎನ್ ರಾಜು. ಜಿಲ್ಲಾ ಪಂಚಾಯಿತಿ ಉಪಾಧ್ಯಕ್ಷೆ ಶ್ರೀಮತಿ ನಿರ್ಮಲ ಮುನಿರಾಜ್ . ಕೋಚಿಮಲ್ ನಿರ್ದೇಶಕ ಆರ್ ಶ್ರೀನಿವಾಸ್ ಕೋಚಿಮುಲ್ ಮಾಜಿ ಅಧ್ಯಕ್ಷ ಗುಡಿಯಪ್ಪ ಪಿಕಾರ್ಡ್ ಎಲ್ಲ ಸದಸ್ಯರು ಹಾಜರಿದ್ದರು

ಬಿಜೆಪಿ ಸೇವಾ ದಿವಸ್ ಆಚರಣೆ

ಶಿಡ್ಲಘಟ್ಟ : ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮದಿನದ ಹಿನ್ನೆಲೆ ತಾಲ್ಲೂಕು ಬಿಜೆಪಿ ಸೇವಾ ದಿವಸ್ ಅಂಗವಾಗಿ ನಗರದ ಬಸವೇಶ್ವರ ದೇವಸ್ಥಾನ ಆವರಣದಲ್ಲಿ ಸಸಿ ನಡೆಯುವ ಕಾರ್ಯಕ್ರಮ ಹಾಗೂ ಸ್ವಚ್ಛತಾ ಕಾರ್ಯಕ್ರಮವನ್ನು ನೆರವೇರಿಸಿದ ನಂತರ ಸಾರ್ವಜನಿಕ ಆಸ್ಪತ್ರೆಯ ರೋಗಿಗಳಿಗೆ ಹಣ್ಣು ಹಂಪಲುಗಳನ್ನು ವಿತರಿಸಿ ಮಾತನಾಡಿದ ಕೋಲಾರದ ಸಂಸದ ಎಸ್ ಮುನಿಸ್ವಾಮಿ

ದೇಶದ ವಿಚಾರಕ್ಕೆ ಬಂದಾಗ ಹಿಂದಿ ಕಡ್ಡಾಯವಾಗಿರಬೇಕು ಕೆಲವರು ಭಾಷೆಯ ವಿಚಾರದಲ್ಲಿ ಅನಗತ್ಯ ಗೊಂದಲವನ್ನು ಮೂಡಿಸುತ್ತಿದ್ದಾರೆ ನೆರೆ ರಾಜ್ಯಗಳಾದ ಆಂಧ್ರ ಕೇರಳ ತಮಿಳುನಾಡುಗಳಲ್ಲಿ ಅವರ ಭಾಷೆ ಆಡಳಿತ ಭಾಷೆಯಾಗಿ ಆಗಿಲ್ಲ. ದೇಶದಲ್ಲಿ ಹಿಂದಿ ಮತ್ತು ರಾಜ್ಯದಲ್ಲಿ ಕನ್ನಡ ಭಾಷೆಯಲ್ಲಿ ಯಾವುದೇ ಅಪಸ್ವರ ಇಲ್ಲ ಎಂದರು

ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮದಿನದ ಅಂಗವಾಗಿ ಇಡೀ ದೇಶಾದ್ಯಂತ ಸೇವಾ ದಿವಸ್ ಕಾರ್ಯಕ್ರಮವನ್ನು ಬಿಜೆಪಿ ಪಕ್ಷದ ಕಾರ್ಯಕರ್ತರು ವಿವಿಧ ಸಂಘದ ಕಾರ್ಯಕರ್ತರು ಸಂಘ ಸಮಸ್ಯೆಗಳು ಒಗ್ಗೂಡಿ ಸ್ವಚ್ಛತೆ ಮತ್ತು ಪರಿಸರ ಸಂರಕ್ಷಣೆಗೆ ಕೈ ಜೋಡಿಸಿದ್ದಾರೆ .

ಕೋಲಾರ ಲೋಕಸಭಾ ಕ್ಷೇತ್ರದಲ್ಲಿ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುವುದು ನನ್ನ ಮೊದಲ ಗುರ